ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಜ್ಯದಲ್ಲಿ ಉದಾಹರಣೆಗೆ ಹೇಳುವುದಾದರೆ ಒಬ್ಬ ತರುಣರು ಕೊಪ್ಪದಲ್ಲಿ ಟ್ರಾಕ್ಟರನ್ನು ಅವರೇ ಸೃಷ್ಟಿಮಾಡಿದ್ದಾರೆ ಸುಲಭವಾಗಿ ಮತ್ತು ಚೆನ್ನಾಗಿ ಮಾಡಿದ್ದಾರೆ. ಈಗ ಇರತಕ್ಕ ಎರ್ಲಾ ನಮೂನೆಗಳನ್ನು ಅನುಸರಿಸಿ ಉತ್ತಮರೀತಿ ಮಾಡಿದ್ದಾರೆ. ಅದನ್ನು ರಸ್ತೆಯಲ್ಲಿ ಬಿಟ್ಟಿಲ್ಲ ಅದಕ್ಕೂ ಲೈಸನ್ಸ್ ಬೇಕು ಎಂದು ಕಿರುಕುಳ ಕೊಡುತ್ತಿದ್ದಾರೆ. ಅಂಥವರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡುವುದರ ಮೂಲಕ ನಮ್ಮ ರಾಜ್ಯದಲ್ಲಿರುವ ಪ್ರತಿಭೆಗೆ ಪ್ರಕಾಶನ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅನೇಕ ಸಂದರ್ಭಗಳಲ್ಲಿ ಹಳ್ಳಿಗಳಲ್ಲಿ ಮೂಲೆಮೂಲೆಯಲ್ಲಿ ನಿಷ್ಣಾತರೂ ಇದ್ದರೂ ಸಹಿತ ಇಂಡಸ್ಟ್ರೀಯಲ್ ರಿಗುಲೇಷನ್ ಲೈಸನ್ಸ್ ತೆಗೆದುಕೊಳ್ಳಬೇಕು ಎಂದು ಇರುವಾಗ ದೇಶದಲ್ಲಿ ಎಲ್ಲರೂ ತೆಗೆದುಕೊಳ್ಳಲೇಬೇಕು. ಅದು ಕೂಡ ನಮ್ಮ ರಾಜ್ಯನರ್ಕಾರದ ಹಿಡಿತದಲ್ಲಿ ಇಲ್ಲ. ಕೇಂದ್ರನರ್ಕಾರದ ನಿಯಂತ್ರಣಕ್ಕೆ ಒಳಗಾಗಿದೆ. ಅದಕ್ಕೆ ಈ ಪ್ರಶ್ನೆ ಪಾರ್ಲಿಮೆಂಟಿನಲ್ಲಿ ಕೇಳುವುದು ಒಳ್ಳೆಯ ಊಹೆ.

ಶ್ರೀ ಎಂ. ಬಿ. ರಾಮಸ್ವಾಮಿ.—(ಬ) ಉತ್ತರವಾಗಿ 40 ಎಕರೆ ಇರಬೇಕು ಪವರ್ ಟ್ರಾಕ್ಟರ್ ಬೇಕಾದರೆ ಎಂದು ಇದೆ. 40 ಎಕರೆ ಇಲ್ಲದೇ ಇರುವವರು ಬಹುಭಾಗ ಜನ ಬೇರೆ ವಿಧದಲ್ಲಿ ಉಪಯೋಗಿಸುತ್ತಿದ್ದಾರೆ. 40 ಎಕರೆ ಮೇಲ್ಪಟ್ಟವರಿಗೆ ಕೊಟ್ಟರೆ ಹೆಚ್ಚಿಗೆ ಉತ್ಪನ್ನ ಮಾಡುವುದಕ್ಕೆ ಸಾಧ್ಯ. ಆ ರೀತಿ ಆದೇಶ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—40 ಎಕರೆ ಸರಾಸರಿ ಇದ್ದವರು ಟ್ರಾಕ್ಟರ್ ಪಡೆದಿದ್ದಾರೆ ಎಂದು ಕೇಳಿದ್ದಾರೆ, ಅವಕ್ಕೆ ನಾಲ್ಕುಎಕರೆ ಅಥವಾ ಒಂದುಎಕರೆ ಇದ್ದರೂ ರೂಪಾಯಿ ಕೊಡುತ್ತೇವೆ. ಟ್ರಾಕ್ಟರ್ ಕೊಡಬೇಕೆಂದು ಕೇಳಿದರೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಟಿಲ್ಲರ್ ಪಡೆಯುವಾಗ ಸರಾಸರಿ 4 ಎಕರೆ ಹಿಡುವಳಿದಾರರು ಇದ್ದರೆ ಸಾಕು ಎಂದು ಹೇಳುತ್ತೀರಿ. ಅವರು ಕೊಂಡಿರತಕ್ಕ ಜಮೀನಿನ ಬೆಲೆಗೂ ಟಿಲ್ಲರ್ ಪಡೆಯ ಬೇಕಾದರೆ ಸೊಸೈಟಿ ಮುಖಾಂತರ ಪಡೆಯತಕ್ಕ ಸಂದರ್ಭದಲ್ಲಿ ಟಿಲ್ಲರ್ ಬೆಲೆಗೂ ಹೊಂದಾಣಿಕೆ ಯಾಗತಕ್ಕ ಅಸ್ತಿ ಬೆಲೆಗೂ ಏನಾದರೂ ಸಾಮ್ಯ ಇರಬೇಕು. ಕಡಿಮೆ ಬೆಲೆ ಅಸ್ತಿ ಇರುವ ಸಣ್ಣ ಹಿಡುವಳಿದಾರರಿಗೆ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಟಿಲ್ಲರ್ಸ್ ತೆಗೆದುಕೊಂಡ ಜನಗಳ ಅಸ್ತಿ ಅವರೇಜ್ ಎಷ್ಟು ಬರುತ್ತದೆ ಎಂದು ಪ್ರಶ್ನೆ ಹಾಕಿದ್ದರು. ಅದಕ್ಕೆ ಅವರೇಜ್ 40 ಎಕರೆ ಬರುತ್ತದೆ. ಟಿಲ್ಲರ್ಸ್ ಕೊಡುವಾಗ ಸ್ವಂತ ವ್ಯವಹಾರವನ್ನು ಮಾಡಿಕೊಂಡು ಕೆಲಸ ಮಾಡುತ್ತಾರೆ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಾಲ ಕೊಡುವಾಗ ನಿಜವಾದ ಅಸ್ತಿ ಬೆಲೆಗೆ ಹೊಂದಾಣಿಕೆ ಬೆಲೆನೋಡಿ ಬ್ಯಾಂಕ್ ಅಥವಾ ಆಗ್ರೋ ಇಂಡಸ್ಟ್ರೀಸ್‌ನಿಂದ ಕೊಡುತ್ತಾರೆ ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

Tour Programme of Central and State Ministers

403. Sri KONANDUR LINGAPPA (Thirthahalli).—

Will the Chief Minister be pleased to state :—

(*a*) whether Dr. Sarojini Mahisi, a Central Minister paid a visit to Thirthahalli Taluk of Shimoga District during the last two months ;

(*b*) if so, whether it has come to the notice of the Government that Central an State Ministers tour and take part in functions without intimating the local legislators ;

(*c*) the policy of the State Government in this behalf ?

Sri D. DEVARAJ URS (Chief Minister).—

(*a*) Yes.

(*b*) No.

(*c*) (1) It is left to the Central Ministers to intimate the local Legislators about their tour programmes.

(2) It is a practice with the State Ministers to intimate the local Legislators about their tour programme.

ಶ್ರೀ ಕೋಣಂಪೂರು ಲಿಂಗಪ್ಪ.—ತಮ್ಮ ಮಂಡಲದಲ್ಲಿರುವ ಸಚಿವರು ಮತ್ತು ಕೇಂದ್ರದ ಕೆಲವು ಸಚಿವರು ಮುಂಚಿತವಾಗಿ ಸ್ಥಳೀಯ ಶಾಸಕರಿಗೆ ತಿಳಿಸದೆ ಅನೇಕ ಕಡೆಗಳಲ್ಲಿ ಪ್ರವಾಸ ಮಾಡುತ್ತಾ ಇರುವುದರಿಂದ ಸ್ಥಳೀಯ ಶಾಸಕರಿಗೆ ತೊಂದರೆಯಾಗುತ್ತಾ ಇರುವುದು ಗಮನಕ್ಕೆ ಬಂದಿದೆಯೇ ? ಈ ನೀತಿಯನ್ನು ಕೈಬಿಟ್ಟು ಮುಂಚಿತವಾಗಿ ಸ್ಥಳೀಯ ಶಾಸಕರಿಗೆ ತಮ್ಮ ಪ್ರವಾಸದ ಕಾಲವನ್ನು ತಿಳಿಸುವ ಪರಿಪಾಠವನ್ನು ಇನ್ನು ಮುಂದೆ ಅನುಸರಿತ್ತಾರೆಯೇ ?

† ಶ್ರೀ ಡಿ. ದೇವರಾಜ್ ಅರಸ್.—ನನಗೆ ತಿಳಿದಹಾಗೆ ಸಚಿವರು ಎಲ್ಲಿ ಹೋಗಬೇಕಾದರೂ ಸ್ಥಳದ ಶಾಸಕರಿಗೆ ಅಂದರೆ ಮೇಲ್ಮನೆಯ ಶಾಸಕರು ಮತ್ತು ಕೆಳಮನೆಯ ಶಾಸಕರು ಇದ್ದಾರೆ ಅವರಿಗೆ ಇನ್‌ಫರ್‌ಮೇಷನ್ ತಿಳಿಸಲಿಕ್ಕೆ ಬೇಕು, ಹಾಗೆ ತಿಳಿಸದೆ ಹೋಗಿದ್ದರೆ ಅದು ನನ್ನ ಗಮನಕ್ಕೆ ಬಂದಿಲ್ಲ. ಆದರೂ ಕೊಡ ಕಡ್ಡಾಯವಾಗಿ ಹೇಳುತ್ತೇನೆ ಯಾರೇ ಆಗಲಿ ಸ್ಥಳದಲ್ಲಿ ಇರತ್ಕ ಸಂಬಂಧ ಪಟ್ಟ ಸ್ಥಳದ ಶಾಸಕಾರಿಗೆ ನಿಮ್ಮ ಪ್ರೊಗ್ರಾಮು ಕಳುಹಿಸಿಕೊಡಬೇಕು, ಅದು ಯೋಗ್ಯವಾದ ವಿಚಾರ. ಅದನ್ನು ಕಡ್ಡಾಯವಾಗಿ ಕಳುಹಿಸಬೇಕೆಂದು ಹೇಳುತ್ತೇನೆ. ಕೇಂದ್ರ ಸರ್ಕಾರದ ಸಚಿವರು ಬರುವ ಸಂದರ್ಭಗಳಲ್ಲಿ ನಾನು ಡೈರೆಕ್ಟ್ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ ಆದರೂ ಪತ್ರ ಬರೆದು ತಾವು ಪ್ರವಾಸ ಬಂದಾಗ ಆ ಸ್ಥಳದ ಶಾಸಕರಿಗೆ ತಿಳಿಸತಕ್ಕದ್ದು ಎಂದು ಪ್ರತ್ಯೇಕವಾಗಿ ಕಾಗದ ಬರೆದು ಹೇಳಬಹುದೇ ಹೊರತು ಕಡ್ಡಾಯ ಮಾಡುವುದು ಕಷ್ಟವಾಗುತ್ತದೆ.

Agricultural Families

123. Sri S. BANGARAPPA (Sorab).—

Will the Minister for Agriculture and Forests be pleased to state :—

(*a*) the number of Agriculture families in the State owning lands ;

(*b*) the number of agricultural families depending only on agricultural cooly in the State ;

(*c*) whether the Government has any proposal to raise the rate of agricultural cooly by amending Minimum Wages Act etc ?

Sri K. H. PATIL (Minister for Agricultural and Forests).—

(*a*) 35,18,809 approximately.

(*b*) 13,23,925 approximately.

(*c*) Yes.